ಅ) ಹಾಗಿದ್ದಲ್ಲಿ, ಇದರ ಪ್ರಯೋಜನವನ್ನು ಎಷ್ಟು ಮಂದಿ ಪಡೆದುಕೊಳ್ಳುತ್ತಿರುವರು?

ಇ) ಹಾಗಿಲ್ಲದಿದ್ದಲ್ಲಿ, ಈ ನಿವೃತ್ತ ನೌಕರರುಗಳಿಗೆ 5ನೇ ವೇತನ ಆಯೋಗದ ಶಿಫಾರಸ್ಸಿನಂತೆ ನಿವೃತ್ತಿ ವೇತನವನ್ನು ಜಾರಿಗೊಳಿಸಲು ಸರ್ಕಾರ ನಿಲುವೇನು?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :—

ಅ) ಹೌದು.

ಆ) 228 ಮಂದಿ.

ಇ) ಉದ್ಭವಿಸುವುದಿಲ್ಲ.

ಮೈಸೂರು ಮಹಾನಗರಪಾಲಿಕೆಯಲ್ಲಿ ಪೌರ ಕಾರ್ಮಿಕರ ಕೊರತೆ

2697 (3168) ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೈಸೂರು ಮಹಾನಗರಪಾಲಿಕೆಯಲ್ಲಿ ಪೌರ ಕಾರ್ಮಿಕರ ಕೊರತೆಯಿಂದಾಗಿ ನಗರ ನೈರ್ಮಲ್ಯ ಕಾರ್ಯ ಕುಂಠಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ನಗರ ನೈರ್ಮಲ್ಯ ಕಾರ್ಯವನ್ನು ನಗರದಲ್ಲೆಡೆ ದಿನವು ಕೈಗೊಳ್ಳುವಂತಾಗಲು ಯಾವ ರೀತಿಯ ಕ್ರಮ ಕೈಗೊಂಡಿದೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :—

ಅ) ಪೌರ ಕಾರ್ಮಿಕರ ಕೊರತೆ ಇದ್ದರೂ ನೈರ್ಮಲ್ಯ ಕಾರ್ಯ ಕುಂಠಿತ-ಗೊಂಡಿರುವುದಿಲ್ಲ.

ಆ) ನಗರ ನೈರ್ಮಲ್ಯ ಕಾರ್ಯವನ್ನು ಕೈಗೊಳ್ಳಲು 18 ವಾರ್ಡ್‌ಗಳನ್ನು 4 ಮಾರುಕಟ್ಟೆಗಳನ್ನು ಹಾಗೂ ನಗರದ ಮುಖ್ಯ ರಸ್ತೆಗಳ ಸ್ವಚ್ಛತೆಯನ್ನು ಖಾಸಗಿಯವರಿಗೆ ಗುತ್ತಿಗೆ ನೀಡಲಾಗಿದೆ.

ಗಣಿಗಾರಿಕೆಗಾಗಿ ವಹಿಸಿಕೊಟ್ಟ ಜಮೀನು

2699 (3020) ಶ್ರೀ ಶಿವಣ್ಣ ಎಸ್. (ತುಮಕೂರು) :— ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 2000-01ನೇ ಸಾಲಿನಲ್ಲಿ ಗಣಿಗಾರಿಕೆಗಾಗಿ ವಹಿಸಿಕೊಡಲಾಗಿರುವ ಜಮೀನಿನ ವಿಸ್ತೀರ್ಣ ಎಷ್ಟು;

ಆ) ವಹಿಸಿಕೊಡಲಾಗಿರುವ ಗಣಿಗಾರಿಕೆಯಿಂದ ರಾಜ್ಯದ ಬೊಕ್ಕಸಕ್ಕೆ ಬಂದ ಆದಾಯವೆಷ್ಟು; ಬಾಕಿ ಎಷ್ಟು; ಬಾಕಿ ವಸೂಲಿಗೆ ಕೈಗೊಂಡ ಕ್ರಮಗಳಾವುವು; (ಜಿಲ್ಲಾವಾರು ಮಾಹಿತಿ ನೀಡುವುದು)

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) :—

ಅ) ಗಣಿ ಗುತ್ತಿಗೆ 644.19 ಹೆಕ್ಟೇರ್
ಅಲಂಕಾರಿಕ ಶಿಲೆ 568.20 ಹೆಕ್ಟೇರ್
ಕಲ್ಲು ಗಣಿ ಗುತ್ತಿಗೆ 1078.67 ಹೆಕ್ಟೇರ್

ಆ) 2000-01ನೇ ಸಾಲಿನಲ್ಲಿ ವಹಿಸಿಕೊಡಲಾಗಿರುವ ಗಣಿಗಾರಿಕೆಯಿಂದ ರಾಜ್ಯದ ಬೊಕ್ಕಸಕ್ಕೆ ರೂ.98,00,598.00 ಆದಾಯ ಬಂದಿರುತ್ತದೆ.

2000-01ನೇ ಸಾಲಿನಲ್ಲಿ ಒಟ್ಟಾರೆ ರೂ.29,16,077.00 ಬಾಕಿ ಇರುತ್ತದೆ. ಪ್ರಸ್ತುತ ಸಾಲಿನಲ್ಲಿ ಈ ಬಾಕಿಯನ್ನು ವಸೂಲಿ ಮಾಡಲು ಕ್ರಮ ಜರುಗಿಸಲಾಗುವುದು.

ಜಿಲ್ಲಾವಾರು ಮಾಹಿತಿಗಳನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ.

ಕ್ರ.ಸಂ.	ಜಿಲ್ಲೆ : ವಿಭಾಗೀಯ ಕಛೇರಿ	ಒಟ್ಟು ಆದಾಯ ರೂ.	ಬಾಕಿ ರೂ.
1.	ಬೆಂಗಳೂರು ಉತ್ತರ	314037	314037
2.	ಬೆಂಗಳೂರು ದಕ್ಷಿಣ	260792	260792
3.	ಚಾಮರಾಜನಗರ	1283063	99690
4.	ಚಿಕ್ಕಮಗಳೂರು	114141	26436
5.	ದಕ್ಷಿಣ ಕನ್ನಡ	441594	341915
6.	ಹಾಸನ	1125229	11719
7.	ಕನಕಪುರ	1187961	1094976
8.	ಕೋಲಾರ	91713	91711
9.	ಮಂಡ್ಯ	90315	0

1	2	3	4
10.	ಮೈಸೂರು	76410	76410
11.	ಶಿವಮೊಗ್ಗ	156786	67413
12.	ತುಮಕೂರು	70991	60145
13.	ಬೆಳಗಾಂ	212021	0
14.	ಬಳ್ಳಾರಿ	10451	34120
15.	ಬಿಜಾಪುರ	46400	47500
16.	ಚಿತ್ರದುರ್ಗ	29920	17620
17.	ಧಾರವಾಡ	76515	219066
18.	ಗುಲಬರ್ಗಾ	213630	27236
19.	ಹೊಸಪೇಟೆ	101250	101250
20.	ಇಳಕಲ್	1016956	0
21.	ಕೊಪ್ಪಳ	906783	0
22.	ಸೇಡಂ	1971300	23452
23.	ಉತ್ತರ ಕನ್ನಡ	2340	589
	ಒಟ್ಟು	9800598	2916077

ತುಮಕೂರು ನಗರಸಭೆಯ ಪರಿಶಿಷ್ಟ ಜಾತಿ ಕಲ್ಯಾಣ ಕಾರ್ಯಕ್ರಮಗಳಿಗೆ ಮೀಸಲು ಹಣ

2701 (೩೦೨೨) ಶ್ರೀ ಶಿವಣ್ಣ ಎಸ್. (ತುಮಕೂರು) :— ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತುಮಕೂರು ನಗರ ವ್ಯಾಪ್ತಿಯಲ್ಲಿ ೧೯೯೮-೯೯, ೯೯-೨೦೦೦, ಹಾಗೂ ೨೦೦೦-೦೧ನೇ ಸಾಲಿನಲ್ಲಿ ನಗರಸಭೆಯ ಅನುದಾನದಲ್ಲಿನ ಶೇಕಡ ೧೮ರ ಪರಿಶಿಷ್ಟ ಜಾತಿ ಕಲ್ಯಾಣ ಕಾರ್ಯಕ್ರಮಗಳಿಗೆ ಅಳವಡಿಸಲಾದ ಮೊತ್ತವೆಷ್ಟು; (ವರ್ಷವಾರು ಮಾಹಿತಿ ನೀಡುವುದು)

ಆ) ನಗರಸಭೆ ಆದಾಯದ ರೀತ್ಯಾ ಮೇಲ್ಕಂಡ ವರ್ಷಗಳಲ್ಲಿ ಶೇಕಡ ೧೮ರ ಕಲ್ಯಾಣ ಕಾರ್ಯಕ್ರಮಕ್ಕೆ ಖರ್ಚು ಮಾಡಬೇಕಾದ ಮೊಬಲಗೆಷ್ಟು; ಖರ್ಚು ಮಾಡಲಾದ ಮೊಬಲಗೆಷ್ಟು; (ವರ್ಷವಾರು ಮಾಹಿತಿ ಒದಗಿಸುವುದು)